■ ನಾಗೇಂದ್ರ, ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು

# ಪ್ರಕೃತಿ



ಪ್ರಕೃತಿ ಎಂಟನೇ ತರಗತಿಯಲ್ಲಿ ಓದುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿನಿ.ಆಟ, ಪಾಠಗಳಲ್ಲಿ ಶಾಲೆಯಲ್ಲಿ ಯಾವಾಗಲೂ ಅವಳೇ ಮುಂದು. ಸಂಗೀತ, ನೃತ್ಯಗಳಲ್ಲಿಯೂ ಅವಳಿಗೆ ವಿಶೇಷ ಆಸಕ್ತಿ.

ಒಮ್ಮೆ ಶಾಲೆಯಲ್ಲಿ ಚರ್ಚಾ ಸ್ಪರ್ಧೆ ಏರ್ಪಡಿಸಿದ್ದರು. ಸ್ಪರ್ಧೆಯ ವಿಷಯ ಕಠಿಣವಾಗಿತ್ತು. ಭಾಗವಹಿಸಿದ್ದ ಮಕ್ಕಳೆಲ್ಲ ಅವರ ತಂದೆ, ತಾಯಿ, ಅಕ್ಕ ಅಥವಾ ಅಣ್ಣಂದಿರ ಸಹಾಯ ಪಡೆದು ಸ್ಪರ್ಧೆಗೆ ತಯಾರಾಗುತ್ತಿದ್ದರು. ಪ್ರಕೃತಿ ಸಹ ಅಪ್ಪನಿಂದ ಸಹಾಯ ಕೇಳಿದಳು. ಆದರೆ ಅಪ್ಪ ತನ್ನ ಕೆಲಸದ ಒತ್ತಡದಲ್ಲಿ ಪ್ರಕೃತಿಗೆ ಸಹಾಯ ಮಾಡಲಾಗದೇ, ತಮ್ಮ ಮೊಬೈಲ್ ಕೊಟ್ಟು ಗೂಗಲ್‌ನಲ್ಲಿ ಆ ವಿಷಯದ ಬಗ್ಗೆ ಮಾಹಿತಿ ಸಂಗ್ರಹಿಸಲು ಹೇಳಿದರು.

ಗೂಗಲ್‌ನಲ್ಲಿ ತನಗೆ ಬೇಕಾದ ಮಾಹಿತಿಯೆಲ್ಲಾ ಸುಲಭವಾಗಿ ಸಿಕ್ಕಿದ್ದರಿಂದ, ತನ್ನ ಬುದ್ಧಿಶಕ್ತಿ ಉಪಯೋಗಿಸದೇ ಚರ್ಚಾ ಸ್ಪರ್ಧೆಯಲ್ಲಿ ಪ್ರಕೃತಿ ಮೊದಲ ಬಹುಮಾನ ಪಡೆದಳು. ಅಂದಿನಿಂದ ಪ್ರಕೃತಿಗೆ ಮೊಬೈಲ್ ಮತ್ತು ಗೂಗಲ್ ಬಗ್ಗೆ ವಿಶೇಷ ಆಸಕ್ತಿ ಬೆಳೆಯಿತು. ಅಪ್ಪ ಮನೆಗೆ ಬಂದ ತಕ್ಷಣ ಅವರ ಮೊಬೈಲ್ ತೆಗೆದುಕೊಂಡು ಅದರಲ್ಲೇ ಹೆಚ್ಚಿನ ಸಮಯ ಕಳೆಯಲು ಶುರು ಮಾಡಿದಳು. ಬಹಳ ಬೇಗ ಅವಳಿಗೆ ಮೊಬೈಲ್ ಗೀಳು ಅಂಟಿಕೊಂಡಿತು. ಓದು, ಆಟ, ಮತ್ತಿತರ ಚಟುವಟಿಕೆಗಳಲ್ಲಿ ಆಸಕ್ತಿ ಕುಂಠಿತವಾಗತೊಡಗಿತು. ಬರುಬರುತ್ತ ಸ್ಪರ್ಧೆಗಳಲ್ಲಿ ಭಾಗವಹಿಸುವುದನ್ನೇ ಬಿಟ್ಟುಬಿಟ್ಟಳು. ನೃತ್ಯ, ಸಂಗೀತಗಳಂತೂ ಮರೆತೇ ಹೋಯಿತು. ಸದಾ ತಮ್ಮ ಕೆಲಸದಲ್ಲಿ ಮುಳುಗಿರುತ್ತಿದ್ದ ಅವಳ ಅಪ್ಪ, ಅಮ್ಮ ಮಗಳ ಮೊಬೈಲ್ ಗೀಳಿನ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ..

ಆಟ, ಪಾಠ, ಇತರ ಚಟುವಟಿಕೆಗಳಲ್ಲಿ ಯಾವಾಗಲೂ ಮುಂದಿರುತ್ತಿದ್ದ ಪ್ರಕೃತಿ ಇತ್ತೀಚೆಗೆ, ಎಲ್ಲಾ ವಿಷಯಗಳಲ್ಲೂ ಹಿಂದೆ ಬೀಳುತ್ತಿರುವುದನ್ನು ಕಂಡು ಶಾಲೆಯಲ್ಲಿ ಶಿಕ್ಷಕರಿಗೆ ಆಶ್ಚರ್ಯದ ಜೊತೆಗೆ ಬೇಸರವೂ ಆಯಿತು. ಈ ಬಗ್ಗೆ ಯಾವ ರೀತಿಯಲ್ಲಿ ವಿಚಾರಿಸಿದರೂ ಅವಳ ಬಾಯಿ ಬಿಡಿಸಲಾಗಲಿಲ್ಲ. ಕೊನೆಗೆ ಅವಳ ಪೋಷಕರನ್ನೇ ಕರೆಸಿ ವಿಚಾರಿಸಿದಾಗ ಶಿಕ್ಷಕರಿಗೆ ಆಘಾತವಾಯಿತು. ಕಾರಣ, ಅವಳ ಅಪ್ಪ, ಅಮ್ಮಂದಿರಿಗೆ ಪ್ರಕೃತಿಯ ಹಿನ್ನಡೆಯ ಬಗ್ಗೆ ತಿಳಿದೇ ಇರಲಿಲ್ಲ. ಎಂದಿನಂತೆ ತಮ್ಮ ಮಗಳು ಎಲ್ಲಾ ವಿಷಯದಲ್ಲೂ ಮುಂಚೂಣಿಯಲ್ಲಿದ್ದಾಳೆಂದೇ ಭಾವಿಸಿದ್ದರು.

ಮುಖ್ಯೋಪಾಧ್ಯಾಯರಿಂದ ವಿಷಯ ತಿಳಿದ ಮೇಲೆ ಆಘಾತಗೊಳ್ಳುವ ಸರದಿ ಪ್ರಕೃತಿಯ ಅಪ್ಪ, ಅಮ್ಮಂದಿರದಾಯಿತು. ಪ್ರಕೃತಿಯ ಈ ಸ್ಥಿತಿಗೆ ಕಾರಣ ಅವಳ ಮೊಬೈಲ್ ಹುಚ್ಚು ಎಂದು ಅವರಿಗೆ ತಿಳಿಯಿತು. ಈ ಹುಚ್ಚು ಬಿಡಿಸುವ ಎಲ್ಲಾ ತರಹ ಪ್ರಯತ್ನಗಳನ್ನೂ ಮಾಡಿದರು. ಪ್ರೀತಿಯಿಂದ ಹೇಳಿದರು. ಬೈದು ಹೇಳಿದರು. ಕೊನೆಗೆ ಎರಡೇಟೂ ಕೊಟ್ಟರು. ಆದರೆ ಫಲಿತಾಂಶ ಮಾತ್ರ ಸೊನ್ನೆ. ಮೊಬೈಲ್ ಕೊಡದಿದ್ದರೆ ಅವಳ ಸಿಟ್ಟು, ಹಟ ತಾರಕಕ್ಕೇರುತ್ತಿತ್ತು. ಅವಳ ಅಪ್ಪ, ಅಮ್ಮನಿಗೆ ದಿಕ್ಕು ತೋಚದಂತಾಯಿತು. ವಿಷಯ ತಿಳಿದ ಉಪಾಧ್ಯಾಯರೂ ಸಾಕಷ್ಟು ಬುದ್ಧಿ ಹೇಳಿದರೂ ಏನೂ ಉಪಯೋಗವಾಗಲಿಲ್ಲ.

ಒಂದು ದಿನ ಪ್ರಕೃತಿ ಮಧ್ಯಾಹ್ನ ಮನೆಯಲ್ಲಿ ಸೋಫಾದಲ್ಲಿ ಕುಳಿತು, ಬರುತ್ತಿದ್ದ ನಿದ್ದೆಯನ್ನು ಬಲವಂತವಾಗಿ ತಡೆದು, ಗಳಿಗೆಗೊಮ್ಮೆ ಆಕಳಿಸುತ್ತ, ಮೊಬೈಲ್‌ನಲ್ಲಿ ವೀಡಿಯೊ ಗೇಮ್ ಆಡುತ್ತಿದ್ದಳು. ಹೀಗೆ ಆಟವಾಡುತ್ತಾ ಯಾವುದೋ ಲಿಂಕ್ ಒತ್ತಿದಳಷ್ಟೇ. ಸರಕ್ಕನೆ ಮೊಬೈಲ್ ಪರದೆ ಅವಳನ್ನು ನುಂಗಿಬಿಟ್ಟಿತು. ಒಂದು ಕ್ಷಣ ಪ್ರಕೃತಿ ದಿಗ್ಭ್ರಾಂತಳಾದಳು.

ಅವಳು ಪ್ರವೇಶಿಸಿದ ಲೋಕ ನಿರ್ಜೀವವಾಗಿತ್ತು. ಅಲ್ಲಿ ಜೀವಂತ ಮನುಷ್ಯರು, ಪ್ರಾಣಿಗಳು, ಪಕ್ಷಿಗಳು, ಸುಂದರವಾದ ಮರ ಗಿಡಗಳು, ನೀರು, ಆಹ್ಲಾದಕರ ಗಾಳಿ ಯಾವುದೂ ಇರಲಿಲ್ಲ. ಇಲ್ಲಿದ್ದಿದ್ದೆಲ್ಲಾ ಯಂತ್ರಗಳಂತೆ ಚಲಿಸುತ್ತಿದ್ದ ಪ್ರಾಣಿ,ಪಕ್ಷಿಗಳು, ರೋಬೊಗಳಂತಹ ಮನುಷ್ಯರು, ಕೋಟ್ಯಂತರ ಪಿಕ್ಸೆಲ್‌ಗಳಿಂದಾದ ಮರ ಗಿಡಗಳು, ಉಸಿರಾಡಲು ಅಸಾಧ್ಯವಾದ ಗಾಳಿ.

ಪ್ರಕೃತಿಗೆ ಈ ಉಸಿರುಗಟ್ಟಿಸುವ ವಾತಾವರಣದಿಂದ ತಕ್ಷಣ ಓಡಿ ಹೋಗಿ ತನ್ನ ಸುಂದರ ಪ್ರಪಂಚ ಸೇರಿಕೊಳ್ಳಬೇಕೆನಿಸಿತು.

“ನಾನು ಇಲ್ಲಿಂದ ಹೊರಗೆ ಹೋಗಬೇಕು” ಎಂದು ಜೋರಾಗಿ ಕಿರುಚಿದಳು.

ಆಗ ಒಂದು ಧ್ವನಿ ‘‘ನೀನು ನಿನ್ನ ಪ್ರಪಂಚಕ್ಕೆ ವಾಪಸ್ ಹೋಗಬೇಕಾದರೆ, ಆ ಪ್ರಪಂಚದ ‘ಸಂಕೇತ ಪದ’ (ಪಾಸ್‌ವರ್ಡ್) ಹೇಳು” ಎಂದಿತು. ಅವಾಕ್ಕಾದ ಪ್ರಕೃತಿ ತಡವರಿಸುತ್ತಾ ‘ಅದೇನೋ ನನಗೆ ಗೊತ್ತಿಲ್ಲ’ ಎಂದಳು. ಆಗ ಆ ಧ್ವನಿ ‘ಒಂದು ಸುಳಿವು ನೀಡುತ್ತೇನೆ. ಪ್ರಯತ್ನಿಸು’ ಎಂದು ಹೇಳಿ ಪ್ರಶ್ನೆಯೊಂದನ್ನು ಅವಳ ಮುಂದಿಟ್ಟಿತು. ‘ಬಣ್ಣವಿದೆ ಆದರೆ ಚಿತ್ರವಲ್ಲ, ಚಲಿಸುತ್ತದೆ ಆದರೆ ಯಂತ್ರವಲ್ಲ’ ಎಂದು ಮುಂದುವರೆಸಿತ್ತಿರುವಾಗಲೇ ಪ್ರಕೃತಿಗೆ ‘ಸಂಕೇತ ಪದ’ ತಿಳಿದು ಹೋಯಿತು. ಖುಷಿಯಿಂದ ‘ಆ ಸಂಕೇತ ಪದ ಪ್ರಕೃತಿ’ ಎಂದು ಜೋರಾಗಿ ಕೂಗಿದಳು.

‘ಪ್ರಕೃತಿ ಏಳಮ್ಮ, ನಿನ್ನ ಹೆಸರನ್ನು ನೀನೇ ಕನವರಿಸುತ್ತಿದ್ದೀಯಲ್ಲ’ ಎಂದು ಅಪ್ಪ ಪ್ರಕೃತಿಯನ್ನು ಎಚ್ಚರಿಸಿದರು. ಎಚ್ಚರಗೊಂಡ ಪ್ರಕೃತಿಗೆ ತಾನು ಇಷ್ಟು ಹೊತ್ತು ಕಂಡದ್ದು ಮೊಬೈಲ್ ಪ್ರಪಂಚದ ಭಯಾನಕ ಕನಸು ಎಂದು ಅರಿವಿಗೆ ಬಂತು.

ಮೊಬೈಲ್ ಹುಚ್ಚಿನ ದುಷ್ಪರಿಣಾಮಗಳು ಅವಳ ಕಣ್ಣ ಮುಂದೆ ಗೋಚರಿಸತೊಡಗಿದವು. ತನ್ನ ತಪ್ಪಿನ ಪೂರ್ಣ ತಿಳುವಳಿಕೆ ಆಯ್ತು. ಮೊಬೈಲ್ ಪರದೆಯ ಪ್ರಪಂಚಕ್ಕಿಂತ, ನೈಜ ಪ್ರಪಂಚವೇ ಸುಂದರ ಎಂಬ ಸತ್ಯದ ಅರಿವಾಯಿತು, ಅಪ್ಪ, ಅಮ್ಮನಿಗೆ ತನ್ನ ಕನಸನ್ನು ವಿವರಿಸಿ, ಇನ್ನು ಮುಂದೆ ತಾನು ಮೊಬೈಲ್ ಗೀಳನ್ನು ತ್ಯಜಿಸುವುದಾಗಿ ದೃಢನಿರ್ಧಾರ ಮಾಡಿದಳು.

ಪ್ರಕೃತಿಯ ಅಪ್ಪ, ಅಮ್ಮನ ಮನಸ್ಸು ನಿರಾಳವಾಯ್ತು. ವಿಷಯ ತಿಳಿದ ಶಿಕ್ಷಕರೂ ಸಂತೋಷ ಪಟ್ಟರು.

ಪ್ರಕೃತಿ ಮತ್ತೆ ಪ್ರಕೃತಿಯಾದಳು. ■